**ಅ.ದಾ.ಸಂ. 99 /2023 ಪಿ.ಡಬ್ಲೂ.1**

**<u>ದಿನಾಂಕಃ 23.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು:- ಪ್ರತಿವಾದಿಗಳ ಪರ ಶ್ರೀ ಆರ್.ವಿ.ಕೆ. ವಕೀಲರಿಂದಃ</u>**

1) ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ವಾದ ಪತ್ರದ ಸಂಗತಿಗಳನ್ನು ನಾನು ತಿಳಿದುಕೊಂಡಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿನ ಸಂಗತಿಗಳನ್ನು ನಾನು ತಿಳಿದುಕೊಂಡಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಮತ್ತು ವಾದ ಪತ್ರ ತಯಾರಿಸಲು ನಾನೇ ಮಾಹಿತಿಯನ್ನು ನೀಡಿರುತ್ತೇನೆ. ನನ್ನ ತಂದೆಗೆ ಒಟ್ಟು 3 ಕಡೆ ಪಿತ್ರಾರ್ಜಿತವಾಗಿ ಸೇರಿದ ಆಸ್ತಿ ಇರುತ್ತದೆ. ಸದರಿ ಜಮೀನುಗಳ ಸರ್ವೆ ನಂಬರ್ ನನಗೆ ನೆನಪಿಲ್ಲ. ನಿಮ್ಮ ತಂದೆ ಆತನ ಜೀವಿತ ಕಾಲದಲ್ಲಿ ದಾವಾ ಸ್ವತ್ತಗಳಳಿಂದ ಬಂದ ಆದಾಯದಿಂದ ಬೇರೆ ಜಮೀನುಗಳನ್ನು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ತಾವು ತುಂಬಾ ಚಿಕ್ಕ ವಯಸ್ಸಿನವರು ಇರುವಾಗ ತನ್ನ ತಂದೆ ಖರೀದಿ ಮಾಡಿರುವುದಾಗಿ ನುಡಿಯುತ್ತಾರೆ. ನನ್ನ ತಂದೆ ಕ್ರಯಕ್ಕೆ ಪಡೆದ ಜಮೀನುಗಳ ಸರ್ವೆ ನಂಬರ್ ನನಗೆ ನೆನಪಿಲ್ಲ. ಆ ರೀತಿ ಕ್ರಯಕ್ಕೆ ಪಡೆದ ಸ್ವತ್ತುಗಳನ್ನು ಈ ಪ್ರಕರಣದಲ್ಲಿ ಸೇರಿಸಿರುತ್ತೇವೆ.

2) ನಿಮ್ಮ ತಂದೆ ಆತನ ಜೀವಿತ ಕಾಲದಲ್ಲಿ ಜಮೀನನ್ನು ನಿಮ್ಮ ಮತ್ತು ನಿಮ್ಮ ತಂದೆಯ ಹೆಸರಿನಲ್ಲಿ ಜಂಟಿಯಾಗಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1996-97ನೇ ಸಾಲಿನಲ್ಲಿ ನನ್ನ ತಂದೆ ಎರಡು ಸ್ವತ್ತುಗಳನ್ನು ನನ್ನ ಹೆಸರಿನಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂ.414/1 ಮತ್ತು 414/3 ರ ಜಮೀನುಗಳ ಪಹಣಿ ಪತ್ರಿಕೆ ನನ್ನ ಹೆಸರಿನಲ್ಲಿ ಇದೆ ಎಂದರೆ ಸರಿ. ಸದರಿ ಸ್ವತ್ತುಗಳನ್ನು ನಾನು ಖರೀದಿ ಮಾಡಿರುತ್ತೇನೆ. 1996-97ನೇ ಸಾಲಿನಲ್ಲಿ ನನಗೆ ಜಮೀನನ್ನು ಖರೀದಿ ಮಾಡಲು ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಶಾಲೆಯಲ್ಲಿ ಆಯಾ ಕೆಲಸ ಮಾಡಿದ್ದು ಆ ಬಗ್ಗೆ ದಾಖಲೆಗಳು ಇವೆ. ದಿಃ16.09.1999 ರಲ್ಲಿ ನಿಮ್ಮ ಮತ್ತು ನಿಮ್ಮ ತಂದೆಯ ಹೆಸರಿನಲ್ಲಿ ಜಂಟಿಯಾಗಿ ಮೈಸೂರಿನಲ್ಲಿ ಒಂದು ಮನೆಯನ್ನು ಖರೀದಿ ಮಾಡಲಾಗಿದೆ ಎಂದರೆ ಸಾಕ್ಷಿಯು ತಾನು ಮತ್ತು ತನ್ನ ತಂಗಿಯ ಗಂಡ ಒಟ್ಟಾಗಿ ಖರೀದಿ ಮಾಡಿರುವುದಾಗಿ ನುಡಿಯುತ್ತಾರೆ. ನನ್ನ ತಂದೆ ತನ್ನ ಒಟ್ಟು ಕುಟುಂಬದ ಆದಾಯದಿಂದ ನನ್ನ ಮತ್ತು ಆತನ ಹೆಸರಿನಲ್ಲಿ ಜಂಟಿಯಾಗಿ ಮನೆ ಮತ್ತು ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ

ಸರಿಯಲ್ಲ. ಒಟ್ಟು ಕುಟುಂಬದ ಆಸ್ತಿಯಲ್ಲಿ ಎಲ್ಲರಿಗೂ ಪಾಲು ಹೋಗುತ್ತದೆ ಎಂಬ ಕಾರಣಕ್ಕೆ ಸದರಿ ಮನೆ ಮತ್ತು ಜಮೀನನ್ನು ಬಿಟ್ಟು ಈ ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

3) ನನ್ನ ತಂದೆ ಕಳೆದ 23 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ಆ ರೀತಿ ನಿಮ್ಮ ತಂದೆ ಮೃತ ಪಟ್ಟ ನಂತರ ನಿಮ್ಮ ತಾಯಿ ದಾವಾ ಸ್ವತ್ತು ಮತ್ತು ಇತರೆ ಸ್ವತ್ತುಗಳನ್ನು ಬಾಯಿ ಮಾತಿನ ಮೂಲಕ ವಿಭಾಗ ಮಾಡಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿ ಆ ರೀತಿ ವಿಭಾಗ ಮಾಡುವ ಮೂಲಕ ನನ್ನ ಮತ್ತು ನನ್ನ ತಂಗಿಗೆ ಮನೆ ಮತ್ತು ಜಮೀನನ್ನು ನೀಡಿ ಉಳಿದ ಸ್ವತ್ತುಗಳನ್ನು 2, 6 ಮತ್ತು 8ನೇ ಪ್ರತಿವಾದಿಗಳಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ 1 ರಿಂದ 4ನೇ ಅನುಸೂಚಿ ಸ್ವತ್ತುಗಳು 1ನೇ ಪ್ರತಿವಾದಿ ಮತ್ತು 6ನೇ ಪ್ರತಿವಾದಿಯ ಭಾಗಕ್ಕೆ ಬಂದಿರುತ್ತದೆ ಎಂದರೆ ಸಾಕ್ಷಿಯು ಆ ರೀತಿ ಯಾವುದೇ ಭಾಗ ಆಗಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಖಾತೆಗಳು ಈ ದಾವೆ ಹೂಡಿದ ನಂತರ ಅವರ ಹೆಸರಿಗೆ ಬದಲಾವಣೆ ಮಾಡಿಕೊಂಡಿರುತ್ತಾರೆ. ಆ ರೀತಿ ಖಾತೆ ಬದಲಾದ ಕುರಿತು ಅದನ್ನು ಕಂದಾಯ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುತ್ತೇವೆ ಮತ್ತು ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇವೆ.

4) 1ನೇ ಪ್ರತಿವಾದಿ ತನ್ನ ಭಾಗಕ್ಕೆ ಬಂದ ಸ್ವತ್ತನ್ನು 6ನೇ ಪ್ರತಿವಾದಿಗೆ ದಿಃ 21.12.2022 ರಂದು ಹಕ್ಕು ನಿವೃತ್ತಿ ಪತ್ರದ ಮೂಲಕ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪತ್ರದ ಆಧಾರದ ಮೇಲೆ ದಾವಾ 1 ರಿಂದ 4ನೇ ಅನುಸೂಚಿ ಸ್ವತ್ತುಗಳ ಖಾತೆಗಳು 6ನೇ ಪ್ರತಿವಾದಿಯ ಹೆಸರಿಗೆ ಬದಲಾಗಿದೆ ಎಂದರೆ ಸರಿಯಲ್ಲ. ಸದರಿ ಹಕ್ಕು ನಿವೃತ್ತಿ ಪತ್ರದ ಬಗ್ಗೆ ನನಗೆ ತಿಳಿದಿರಲಿಲ್ಲ. ದಾವಾ 5 ಮತ್ತು 7ನೇ ಅನುಸೂಚಿ ಸ್ವತ್ತುಗಳನ್ನು 2ನೇ ಪ್ರತಿವಾದಿಗೆ ನೀಡಲಾಗಿದ್ದು ಆತನ ಹೆಸರು ಕಂದಾಯ ದಾಖಲೆಗಳಲ್ಲಿ ಬಂದಿದೆ ಎಂದರೆ ಸಾಕ್ಷಿಯು ಸ್ವತ್ತುಗಳಲ್ಲಿ ವಿಭಾಗ ಆಗಿಲ್ಲ ಆದರೆ ಪಹಣಿ ಪತ್ರಿಕೆಯಲ್ಲಿ ಅವರ ಹೆಸರು ಸೇರಿಸಿಕೊಂಡಿದ್ದಾಗಿ ನುಡಿಯುತ್ತಾರೆ. ದಾವಾ 6 ಮತ್ತು 8ನೇ ಅನುಸೂಚಿ ಸ್ವತ್ತುಗಳನ್ನು 8ನೇ ಪ್ರತಿವಾದಿಗೆ ನೀಡಲಾಗಿದ್ದು ಆತನ ಹೆಸರು ಕಂದಾಯ ದಾಖಲೆಗಳಲ್ಲಿ ಬಂದಿದೆ ಎಂದರೆ ಸಾಕ್ಷಿಯು ಸ್ವತ್ತುಗಳಲ್ಲಿ ವಿಭಾಗ ಆಗಿಲ್ಲ ಆದರೆ ಪಹಣಿ ಪತ್ರಿಕೆಯಲ್ಲಿ ಅವರ ಹೆಸರು ಸೇರಿಸಿಕೊಂಡಿದ್ದಾಗಿ ನುಡಿಯುತ್ತಾರೆ.

5) 1ನೇ ಪ್ರತಿವಾದಿ ನನ್ನ ತಾಯಿಯು ಕಳೆದ 1 ವರ್ಷದ ಹಿಂದೆ ಮೃತಪಟ್ಟಿರುತ್ತಾರೆ. ಆಕೆ ತನ್ನ ಜೀವಿತಾವಾಧಿಯಲ್ಲಿಯೇ ದಾವಾ ಸ್ವತ್ತುಗಳನ್ನು ಮೌಖಿಕವಾಗಿ ಭಾಗ ಮಾಡಿ ಕೊಟ್ಟಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಕ್ರಯಕ್ಕೆ ಪಡೆದ ಜಮೀನು ಮತ್ತು ಮನೆಯನ್ನು ವಿಭಾಗದ ಮೂಲಕ ನನ್ನ ಭಾಗಕ್ಕೆ ಪಡೆದುಕೊಂಡಿದ್ದರೂ ಸಹ ದಾವಾ ಸ್ವತ್ತುಗಳಲ್ಲಿ ಹೆಚ್ಚುವರಿಯಾಗಿ ಭಾಗಾಂಶ ಪಡೆಯುವ ಸಲುವಾಗಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಿಮ್ಮ ತಂದೆ ಆತನ ಜೀವಿತಾವಧಿಯಲ್ಲಿ ಬೆಂಗಳೂರಿನಲ್ಲಿ ಒಂದು ಮನೆಯನ್ನು ನನ್ನ ಹೆಸರಿಗೆ ಖರೀದಿ ಮಾಡಿ ನೀಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ತಾನು ತನ್ನ ತಂದೆ ಮೃತಪಟ್ಟ ನಂತರ ತನ್ನ ಹಣದಿಂದ ಆ ಸ್ವತ್ತನ್ನು ಖರೀದಿ ಮಾಡಿದ್ದಾಗಿ ನುಡಿಯುತ್ತಾರೆ. ನಾನು ಸುಳ್ಳು ಪ್ರಕರಣ ದಾಖಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**